

**ರಾಧೇಶ ತೋಳ್ಪಾಡಿ**

ಕಲೆ: ಸಂತೋಷ್ ಸಸಿಹಿತ್ಲು



# ಚಳಿಯಾಗ್ಬಿಟ್ರೆ

ಕಂಬಳಿ ಹುಳಕ್ಕೆ ಚಳಿಯಾಗ್ಬಿಟ್ರೆ
ಏನ್ಮಾಡುತ್ತೋ ಪಾಪ!
ಮಿಸ್ಟರ್ ಕರಿಕುರಿ ಹತ್ತಿರ ಹೋಗಿ
ಉಣ್ಣೆಯ ಬೇಡುವ ಶಾಪ!

ಕುರಿರಾಯರಿಗೇ ಚಳಿಯಾಗ್ಬಿಟ್ರೆ
ಏನ್ಮಾಡ್ತಾರೋ ಪಾಪ!
ಕರಿಕರಿ ಕರಡಿಯ ಹುಡುಕಾಡುತ್ತಾ
ಕಾಡಿಗೆ ಓಡುವ ತಾಪ!

ಶ್ರೀಮಾನ್ ಕರಡಿಗೇ ಚಳಿಯಾಗ್ಬಿಟ್ರೆ
ಏನ್ಮಾಡ್ತಾರೆ ಗೊತ್ತಾ?
ಪವಡಿಸ್ತಾರೆ ಬೆಟ್ಟವ ಹೊದ್ದು
ಕೆಡಿಸಿಕೊಳ್ಳದೆ ಚಿತ್ತ!

ದಿಟ್ಟ ಬೆಟ್ಟಕೇ ಚಳಿಯಾಗ್ಬಿಟ್ರೆ
ಏನ್ಮಾಡೋದು ಶಿವನೇ!
ತಲೆ ಬಿಸಿ ಇಲ್ಲ ರೆಡಿ ಇದೆಯಲ್ಲ
ಬೆಡ್ ಶೀಟ್ ನೀಲಿಯ ಬಾನೇ!

ಬಾನಿಗೇ ಚಳಿ ಚಳಿ ಚಳಿಯಾಗ್ಬಿಟ್ರೆ
ಕಾಪಾಡೋಕೆ ಯಾರು?
ಯಾರ್ ಯಾರ್ ಯಾಕೆ ಇದ್ದಾರಲ್ಲ
ನಮ್ಮ ಇಂಗ್ಲಿಷ್ ಸಾರು!